# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 05-11-2022ರ ಶನಿವಾರ ಅಪರಾಹ್ನ : 12-00 ಗಂಟೆಗೆ ಜರುಗಿದ "ವಿಶೇಷ ಸಿಂಡಿಕೇಟ್ ಸಭೆ"ಯ ನಡವಳಿಗಳು.**

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಡಾ.ಎಂ.ಎಸ್.ಗಿರಿಧರ್ ರಾವ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಪ್ರೊ.ಎಚ್.ರಾಜಶೇಖರ್ | ಸದಸ್ಯರು |
| 5. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 6. | ಡಾ. ಚೈತ್ರ ನಾರಾಯಣ | ಸದಸ್ಯರು |
| 7. | ಡಾ. ಸೈಯದ್ ಕಾರುಖ ಮೊಹಿದ್ದೀನ್ | ಸದಸ್ಯರು |
| 8. | ಡಾ. ನಿರ್ಮಲ.ಹೆಚ್.ಎಂ | ಸದಸ್ಯರು |
| 9. | ಡಾ. ಜಿ.ಗೋವಿಂದರಾಜು | ಸದಸ್ಯರು |
| 10. | ಡಾ. ಜಯಶಂಕರ್. ಎನ್ | ಸದಸ್ಯರು |
| 11. | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 12. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 13. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 14. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 15. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 16. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ಸದಸ್ಯರು |
| **18.** | ಪ್ರೊ. ಆರ್.ಶಿವಪ್ಪ | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಡಾ.ಹೆಚ್.ಎಸ್.ಗಂಗೇಗೌಡ
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ತದನಂತರ, ಮಾನ್ಯ ಕುಲಪತಿಯವರ ಅನುಮತಿ ಮೇರೆಗೆ ಕಾರ್ಯಸೂಚಿಗಳನ್ನು ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 2022/III.1 | "ಪ್ರೊ. ಎನ್. ಲಕ್ಷ್ಮೀದೇವಿ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 29 (2) (r) ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು M.Sc in Microbiology ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ, ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಪ್ರೊ. ಎನ್. ಲಕ್ಷ್ಮೀದೇವಿ ಚಿನ್ನದ ಪದಕ" ಹೆಸರಿನಲ್ಲಿ ದತ್ತಿ ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| ವಿಶೇಷ ಸಭೆ 2022/III.2 | Retirement of Post-Graduate Teachers during the Calendar Year-2023. |
| ತೀರ್ಮಾನ | The Syndicate approved the teachers working in the Post-Graduate Department of Studies to retire on attaining the age of superannuation during the calendar year 2023 and also for re-employment on contractual basis, if required till the end of respective Semester. |
| ವಿಶೇಷ ಸಭೆ 2022/III.3 | ಅಧಿಕಾರಿ/ಅಧ್ಯಾಪಕೇತರ ಉದ್ಯೋಗಿಗಳು ಈಗಾಗಲೇ ವಿದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧಿಕಾರಿ ಮತ್ತು ಉದ್ಯೋಗಿಗಳು ವೈಯಕ್ತಿಕವಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಈಗಾಗಲೇ ವಿದೇಶಕ್ಕೆ ಹೋಗಿಬಂದಿರುವುದನ್ನು ಸಭೆಯು ಅನುಸಮರ್ಥಿಸಿತು. |

| ಕ್ರ. ಸಂ. | ಉದ್ಯೋಗಿಯ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ವಿಭಾಗ/ಕಾಲೇಜು | ರಜೆ ಅವಧಿ | ವಿದೇಶದ ಹೆಸರು |
|---|---|---|---|
| 1 | ಡಾ. ಆರ್.ಜೆರ್ರಿ ಆರೋಕ್ಯಮೇರಿ<br>ಅಧೀಕ್ಷಕರು<br>ವಿವಿ ಲಲಿತ ಕಲೆಗಳ ಕಾಲೇಜು<br>ಮಾನಸಗಂಗೋತ್ರಿ, ಮೈಸೂರು | 03-10-2022 ರಿಂದ 30-10-2022 | ಕೆನಡಾ ಮತ್ತು ಯು.ಎಸ್ |
| 2 | ಶ್ರೀ ಪುರುಷೋತ್ತಮ.ಸಿ<br>ಹಿರಿಯ ಸಹಾಯಕರು<br>ಹಣಕಾಸು ವಿಭಾಗ<br>ಮೈವಿವಿ, ಮೈಸೂರು | 10-10-2022 ರಿಂದ 18-10-2022 | ಮಲೇಷಿಯಾ ಮತ್ತು ಬ್ಯಾಂಕಾಕ್ |
| 3 | ಶ್ರೀಮತಿ ಹೇಮಲತ<br>ಅಧೀಕ್ಷಕರು<br>ಪರೀಕ್ಷಾ ವಿಭಾಗ, ಮೈವಿವಿ, ಮೈಸೂರು | 17-10-2022 ರಿಂದ 27-10-2022 | ಲಂಡನ್ |

| | |
|---|---|
| **ವಿಶೇಷ ಸಭೆ**<br>**2022/III.4** | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಮಂಜೂರು ಮಾಡಿದ್ದ ಸೆಬಾಟಿಕಲ್ ರಜೆಯ ಅಂತಿಮ ಅಧ್ಯಯನ ವರದಿಗಳ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಾದ ಪ್ರೊ. ಡಿ.ಗುರು, ಪ್ರೊ. ಸಿ.ಸುಮಂಗಲ ಹಾಗೂ ಪ್ರೊ. ಎಸ್.ಚಂದ್ರಕಿರಣ್ ಇವರುಗಳು ಸಬಾಟಿಕಲ್ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಅಂತಿಮ ಅಧ್ಯಯನ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ನೀಡಿರುವ ಸಬಾಟಿಕಲ್ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ವಿಶೇಷ ಸಭೆ**<br>**2022/III.5** | ಐವತ್ನಾಲ್ಕು ವಿವಿಧ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ ಪ್ರಕರಣ ೩೩ (1) (2) ಮತ್ತು ಅಧಿನಿಯಮದ ಪ್ರಕಾರ ರಚಿಸಲಾಗಿದ್ದ ಈ ಕೆಳಕಂಡ ಅಧ್ಯಯನ ಮಂಡಳಿಗಳನ್ನು ಮತ್ತೆ ಮೂರು ವರ್ಷಗಳ ಅವಧಿಗೆ ಪುನರ್ ರಚಿಸಲು ಸಿಂಡಿಕೇಟ್ ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಿತು.<br>1. Ancient History and Archaeology (CB)<br>2. Anthropology (CB)<br>3. Ambedkar Studies (PG & UG)<br>4. Christianity (CB)<br>5. Diploma in Babu Jaga Jeevanram Studies (PG)<br>6. Development Studies (PG)<br>7. English (PG & UG)<br>8. Economics & Co-operation (PG & UG)<br>9. Fine Arts (CB)<br>10. Gandhian Studies (PG & UG)<br>11. History (PG & UG)<br>12. Journalism and Mass Communication (CB)<br>13. Jainology & Prakrit (PG)<br>14. Kannada (PG & UG)<br>15. Linguistics (CB)<br>16. Malayalam (UG)<br>17. Political Science (PG & UG)<br>18. Philosophy (PG & UG)<br>19. South Indian Studies (CB)<br>20. Sanskrit (PG & UG)<br>21. Sociology (PG & UG)<br>22. Social Work (CB)<br>23. Telugu (UG)<br>24. Tamil (UG)<br>25. Urdu (PG & UG)<br>26. Women's Studies (CB)<br>27. West Asian Studies (PG)<br>28. Botany (PG & UG)<br>29. Biochemistry (PG & UG)<br>30. Bioscience (PG)<br>31. Chemistry (PG & UG)<br>32. Computer Science (PG & UG) |

| | |
|---|---|
| | 33. Criminology (CB)<br>34. Earth Science (PG & UG)<br>35. Environmental Science (CB)<br>36. Food Science and Nutrition (PG)<br>37. Geography (PG & UG)<br>38. Library and Information Science (CB)<br>39. Mathematics (PG & UG)<br>40. Microbiology (PG & UG)<br>41. Molecular Biology (PG)<br>42. Organic Chemistry (PG)<br>43. Physics (PG)<br>44. Psychology (PG & UG)<br>45. Statistics (PG)<br>46. Sericulture (PG & UG)<br>47. Speech & Hearing (CB)<br>48. Business Administration (PG & UG)<br>49. Commerce (PG & UG)<br>50. Education (PG & UG)<br>51. Physical Education (CB)<br>52. Biotechnology (PG & UG)<br>53. Zoology (PG & UG)<br>54. Public Administration (PG) |
| **ವಿಶೇಷ ಸಭೆ 2022/III.6** | ಡಾ. ಎಂ.ಪಿ. ರಮೇಶ, ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಸೇವೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿಯೋಜಿಸುವ ಕುರಿತು. |
| **ತೀರ್ಮಾನ** | ಡಾ. ಎಂ.ಪಿ. ರಮೇಶ, ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಸೇವೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿಯೋಜಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಪುರಸ್ಕರಿಸದಿರಲು ತೀರ್ಮಾನಿಸಿತು. |
| **ವಿಶೇಷ ಸಭೆ 2022/III.7** | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯ ಸಂಬಂಧ ಕರಡು ಅಧಿನಿಯಮಕ್ಕೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಮುಂದೂಡಲಾಯಿತು |
| **ವಿಶೇಷ ಸಭೆ 2022/III.8** | Excel Education Academy, Koorgalli Industrial Area, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Des. (Hons.) (Integrated Design) ಮತ್ತು PG Diploma in Education ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ Excel Education Academy, Koorgalli Industrial Area, ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ B.Des. |

| | |
|---|---|
| | (Hons.) (Integrated Design) ಕೋರ್ಸ್‌ಗೆ 160 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಯೊಂದಿಗೆ ಹಾಗೂ PG Diploma in Education ಕೋರ್ಸ್‌ಗೆ 120 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಯೊಂದಿಗೆ 2023-24ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಭೆಯು ಅನುಮೋದಿಸಿತು. |
| **ವಿಶೇಷ ಸಭೆ 2022/III.9** | ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಕೆ.ಬಿ.ಎಲ್. ಲೇಔಟ್, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ M.Sc. (Reproductive Biology & Clinical Embryology-IVF) ಕೋರ್ಸ್ ಅನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, # 131/1, 2D, 2E, 2F, ಕೆ.ಬಿ.ಎಲ್. ಲೇಔಟ್, ದೇವೆಗೌಡ ಸರ್ಕಲ್ ಹತ್ತಿರ, ಆಲನಹಳ್ಳಿ, ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ M.Sc. (Reproductive Biology & Clinical Embryology-IVF) ಕೋರ್ಸ್‌ಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಯೊಂದಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಭೆಯು ಅನುಮೋದಿಸಿತು. |
| **ವಿಶೇಷ ಸಭೆ 2022/III.10** | 2017ರ ಪಿಹೆಚ್.ಡಿ. ನಿಯಮಾವಳಿ ತಿದ್ದುಪಡಿ ಬಗ್ಗೆ. |
| **ತೀರ್ಮಾನ** | ಸುದೀರ್ಘವಾಗಿ ಚರ್ಚಿಸಿದ ಸಭೆಯು 2017ರ ಪಿಹೆಚ್.ಡಿ ನಿಯಮಾವಳಿ ತಿದ್ದುಪಡಿಯನ್ನು ಈ ಕೆಳಕಂಡಂತೆ ಮಾರ್ಪಾಡು ಮಾಡುವುದರೊಂದಿಗೆ ಅನುಮೋದಿಸಿತು.<br>1) 70 ವರ್ಷದೊಳಗಿರುವ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ವಿಜ್ಞಾನಿಗಳನ್ನು ಪಿಹೆಚ್.ಡಿ ಮಹಾಪ್ರಬಂಧವನ್ನು ಮೌಲ್ಯಮಾಪನ ಮಾಡಲು ಅವಕಾಶ ಮಾಡಿಕೊಡುವುದು.<br>2) 2017ರ ಪಿಹೆಚ್.ಡಿ ನಿಯಮಾವಳಿ ತಿದ್ದುಪಡಿಯ ಕ್ರಮ ಸಂಖ್ಯೆ: 9.4 ರಲ್ಲಿ **Journals with ISSN** ಎಂಬ ವಾಕ್ಯವನ್ನು ತೆಗೆಯುವುದು. |
| **ವಿಶೇಷ ಸಭೆ 2022/III.11** | ಮೈಸೂರು ವಿಶ್ವವಿದ್ಯಾನಿಲಯವು ಹಿಂದುಳಿದ ವರ್ಗಗಳ ಘಟಕದ ವತಿಯಿಂದ ಒಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಹೆಚ್ಚಿಸುವ ಹಾಗೂ ಹೊಸದಾಗಿ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನಿಸುವ ಬಗೆಗೆ. |
| | ಶ್ರೀ ದೊಡ್ಡಚಾರಿ ಅವರು ಮಾತನಾಡಿ, ಪೂರ್ಣಾವಧಿ ಸಂಶೋಧಕರುಗಳಲ್ಲಿ ಕೆಲವರು ಬೇರೆ ಕಡೆ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದೆ. ಅಂತಹ ಸಂಶೋಧಕರುಗಳನ್ನು ಗುರುತಿಸಿ, ಶಿಷ್ಯವೇತವನ್ನು ಸ್ಥಗಿತಗೊಳಿಸಬೇಕೆಂದು ಹಾಗೂ ಷರತ್ತುಗಳು/ಶಿಷ್ಯವೇತನದಲ್ಲಾಗಲೀ ಪಜಾ/ಪವ ಹಾಗೂ ಒಬಿಸಿ ಎಲ್ಲರಿಗೂ ಸಮಾನ ಮಾನದಂಡಗಳನ್ನು ರೂಪಿಸಬೇಕೆಂದು ಹೇಳಿದರು.<br><br>ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ವಿಭಾಗವಾರು ಮೆರಿಟ್ ಅಥವಾ |

| | |
|---|---|
| | ವರ್ಗವಾರು ಆಧಾರದ ಮೇಲೆ ಶಿಷ್ಯವೇತನದ ಸಂಖ್ಯೆಯನ್ನು ನಿಗದಿಪಡಿಸಬೇಕೆಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಪಿಹೆಚ್.ಡಿ ಪದವಿ/ನೆಟ್/ಕೆ-ಸೆಟ್ ತೇರ್ಗಡೆ ಹೊಂದಿರುವವರಿಗೆ ಪ್ರಥಮ ಆದ್ಯತೆ ನೀಡುವುದೆಂದು ತಿಳಿಸಿದರು. |
| **ತೀರ್ಮಾನ** | ಹಿಂದುಳಿದ ವರ್ಗಗಳ ಘಟಕದ ವತಿಯಿಂದ ಒಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಕ್ರಮಾನುಸಾರ ರೂ.26,000/- ಮತ್ತು ರೂ.29,000/-ಗಳನ್ನು ಹೆಚ್ಚಿಸಲು ಮತ್ತು ಹೊಸದಾಗಿ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿದೆ. |
| **ವಿಶೇಷ ಸಭೆ**<br>**2022/III.12** | ಪ್ರೊ. ಕೃಷ್ಣಮೂರ್ತಿ ಹನೂರು, ಕನ್ನಡ ವಿಭಾಗ ಇವರನ್ನು ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸುವರ್ಣಗಂಗೋತ್ರಿ, ಚಾಮರಾಜನಗರ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿರುವ ಬಗ್ಗೆ. |
| **ತೀರ್ಮಾನ** | ಪ್ರೊ. ಕೃಷ್ಣಮೂರ್ತಿ ಹನೂರು, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸುವರ್ಣಗಂಗೋತ್ರಿ, ಚಾಮರಾಜನಗರ ಇವರನ್ನು ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಹಾಗೂ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸುವರ್ಣಗಂಗೋತ್ರಿ, ಚಾಮರಾಜನಗರ ಇಲ್ಲಿಗೆ ಕನ್ನಡ ವಿಷಯದ ಬೋಧನಾ ಕಾರ್ಯನಿರ್ವಹಿಸಲು ದಿನಾಂಕ: 06-09-2022ರಿಂದ ಜಾರಿಗೆ ಬಂದಂತೆ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ರೂ.25,000/-ಗಳ ಗೌರವಧನದೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ವಿಶೇಷ ಸಭೆ**<br>**2022/III.13** | 2021-22 ಮತ್ತು 2022-23ನೇ (ದಿನಾಂಕ: 01-04-2022 ರಿಂದ 31-10-2022 ರವರೆಗೆ) ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳಿಂದ ವಿವಿಧ ಖಾತೆಗಳಿಗೆ ಆಂತರಿಕ ಸಂಪನ್ಮೂಲಗಳ ನಿಧಿ ವರ್ಗಾವಣೆ ಮಾಡಿರುವುದನ್ನು ಅನುಸಮರ್ಥಿಸುವ ಬಗ್ಗೆ. |
| | ಕೋವಿಡ್-19 ಹಿನ್ನೆಲೆಯಲ್ಲಿ 2021-22 ಮತ್ತು 2022-23ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಆಂತರಿಕ ಆದಾಯದ ಸಂಪನ್ಮೂಲಗಳು ಆಯವ್ಯಯದ ಅಂದಾಜುಗಳಲ್ಲಿನ ನಿರೀಕ್ಷೆಯಂತೆ ಕ್ರೋಢಿಕೃತವಾಗಿರುವುದಿಲ್ಲ. ಆದರೂ ಆಯವ್ಯಯ ಅಂದಾಜುಗಳಲ್ಲಿ ನಿಗದಿಪಡಿಸಿರುವ ವಿವಿಧ ಶೀರ್ಷಿಕೆಗಳ ಅಗತ್ಯ ವೆಚ್ಚಗಳ ಪಾವತಿಗಳು ವಿಶ್ವವಿದ್ಯಾನಿಲಯಕ್ಕೆ ಅನಿವಾರ್ಯವಾಗಿರುತ್ತದೆ. ಈ ಸಂಬಂಧ ದಿನಾಂಕ: 01-04-2022 ರಿಂದ 31-10-2022 ರವರೆಗೆ ಅಗತ್ಯ ವೆಚ್ಚಗಳ ಪಾವತಿಗಳಿಗಾಗಿ, ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳಿಂದ ನಿಧಿಯನ್ನು ಅಂತರಿಕ ವರ್ಗಾವಣೆ ಮಾಡಿಕೊಳ್ಳಲಾಗಿದೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ/ಆರ್ಥಿಕ ಹಿತದೃಷ್ಟಿಯಿಂದ 2021-22 ಮತ್ತು 2022-23ನೇ (01-04-2022 ರಿಂದ ದಿನಾಂಕ: 31-10-2022 ರವರೆಗೆ) ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳಿಂದ ವಿವಿಧ ಖಾತೆಗಳಿಗೆ ಆಂತರಿಕ ಸಂಪನ್ಮೂಲಗಳ ನಿಧಿ ವರ್ಗಾವಣೆ ಮಾಡಿಕೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು.<br>(ಸಿಂಡಿಕೇಟ್ ಸದಸ್ಯರಾದ ಪ್ರೊ. ಜಿ.ವೆಂಕಟೇಶ್ ಕುಮಾರ್ ಅವರನ್ನು ಹೊರತುಪಡಿಸಿ) |

| | |
|---|---|
| **ವಿಶೇಷ ಸಭೆ 2022/III.14** | ದೂರ ಶಿಕ್ಷಣದ ಕಾರ್ಯಕ್ರಮದ ಸ್ನಾತಕ ಪದವಿಯ ಕೋರ್ಸುಗಳಿಗೆ 1 ರಿಂದ 6ನೇ ಚಾತುರ್ಮಾಸಕ್ಕೆ ಹಾಗೂ ಸ್ನಾತಕೋತ್ತರ ಪದವಿಯ 1 ರಿಂದ 4 ನೇ ಚಾತುರ್ಮಾಸದ ಸ್ವಯಂ ಕಲಿಕಾ ಸಾಮಗ್ರಿಗಳನ್ನು ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನವನ್ನು ಪಾವತಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯುವ ಬಗ್ಗೆ. |
| **ತೀರ್ಮಾನ** | ದೂರ ಶಿಕ್ಷಣದ ಕಾರ್ಯಕ್ರಮದ ಸ್ನಾತಕ/ಸ್ನಾತಕೋತ್ತರ ಪದವಿಯ ಕೋರ್ಸುಗಳಿಗೆ I, II, III, IV, V, VI ನೇ ಚಾತುರ್ಮಾಸಕ್ಕೆ ಮತ್ತು ಸ್ನಾತಕೋತ್ತರ ಪದವಿಯ III ಮತ್ತು IV ಚಾತುರ್ಮಾಸದ ಪಠ್ಯಗಳನ್ನು ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ಸಂಬಂಧಪಟ್ಟ ವಿಷಯ ಸಂಯೋಜಕರು ಅನುಮೋದಿಸಿರುವುದನ್ನು ಗಮನಿಸಿದ ಸಭೆಯು ಗೌರವಧನವನ್ನು ಪಾವತಿಸುವುದಕ್ಕೆ ಸಮ್ಮತಿಸಿತು. |
| **ವಿಶೇಷ ಸಭೆ 2022/III.15** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರದ ಅಂದಾಜು ಆಯವ್ಯಯದ ಅನುಮೋದನೆಗಾಗಿ. |
| **ತೀರ್ಮಾನ** | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರದ ಅಂದಾಜು ಆಯವ್ಯಯವನ್ನು ಸಭೆಯು ಅನುಮೋದಿಸಿತು. |
| **ವಿಶೇಷ ಸಭೆ 2022/III.16** | ದೂರ ಶಿಕ್ಷಣ ಕಾರ್ಯಕ್ರಮದ ಸ್ನಾತಕ B.Sc. (IT) ಪದವಿಯ ಕೋರ್ಸುಗಳಿಗೆ III, IV ಮತ್ತು ಸ್ನಾತಕೋತ್ತರ M.Sc. (IT) ಪದವಿಯ ಕೋರ್ಸುಗಳಿಗೆ III ಮತ್ತು IV ಚಾತುರ್ಮಾಸದ ಪಠ್ಯಗಳನ್ನು ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡುವ ಸಂಬಂಧ ಸಿದ್ಧಪಡಿಸಲಾದ ಅಧ್ಯಾಪಕರುಗಳ ಪಟ್ಟಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಬಗ್ಗೆ. |
| **ತೀರ್ಮಾನ** | ದೂರ ಶಿಕ್ಷಣ ಕಾರ್ಯಕ್ರಮದ ಸ್ನಾತಕ B.Sc. (IT) ಪದವಿಯ ಕೋರ್ಸುಗಳಿಗೆ III, IV ಮತ್ತು ಸ್ನಾತಕೋತ್ತರ M.Sc. (IT) ಪದವಿಯ ಕೋರ್ಸುಗಳಿಗೆ III ಮತ್ತು IV ಚಾತುರ್ಮಾಸದ ಪಠ್ಯಗಳನ್ನು ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡುವ ಸಂಬಂಧ ಸಿದ್ಧಪಡಿಸಲಾದ ಅಧ್ಯಾಪಕರುಗಳ ಪಟ್ಟಿಯನ್ನು ಸಭೆಯು ಅನುಮೋದಿಸಿತು. |
| **ವಿಶೇಷ ಸಭೆ 2022/III.17** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಹೆಚ್.ಆರ್.ಎ. ವಿನಾಯಿತಿ ನೀಡುವ ಸಂಬಂಧ ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಹೆಚ್.ಆರ್.ಎ. ಮೊತ್ತವನ್ನು ರೂ.1,000/-ಗಳಿಗೆ ನಿಗದಿಪಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. |
| **ವಿಶೇಷ ಸಭೆ 2022/III.18** | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ಆಡಳಿತ ಹಾಗೂ ಸುಗಮ ಮೆಸ್ ನಿರ್ವಹಣೆಗಾಗಿ ಸಹಾಯಕ ನಿಲಯಪಾಲಕರುಗಳನ್ನು ಆಯ್ಕೆ ಮಾಡುವ ಸಂಬಂಧ ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ಆಡಳಿತ ಹಾಗೂ ಸುಗಮ ಮೆಸ್ ನಿರ್ವಹಣೆಗಾಗಿ ಸಹಾಯಕ ನಿಲಯಪಾಲಕರುಗಳನ್ನು ಆಯ್ಕೆ ಮಾಡಿಕೊಳ್ಳಲು ಸಭೆಯು ಒಪ್ಪಿಗೆ ಸೂಚಿಸಿತು. |

| | |
|---|---|
| ವಿಶೇಷ ಸಭೆ 2022/III.19 | 2021-22ನೇ ಸಾಲಿನ ದೃಢೀಕೃತ ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಬ್ಯಾಲೆನ್ಸ್ ಶೀಟ್‌ಗಳ ವಿವರಗಳನ್ನು ನೀಡಿರುವ ಬಗ್ಗೆ. |
| ತೀರ್ಮಾನ | 2021-22ನೇ ಸಾಲಿನ ದೃಢೀಕೃತ ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಬ್ಯಾಲೆನ್ಸ್ ಶೀಟ್‌ಗಳ ವಿವರಗಳನ್ನು ಸಭೆಯಲ್ಲಿ ಗಮನಿಸಲಾಯಿತು. |
| ವಿಶೇಷ ಸಭೆ 2022/III.20 | ದೈಹಿಕ ಶಿಕ್ಷಣ ವಿಭಾಗದ ತಾತ್ಕಾಲಿಕ ನೌಕರರುಗಳ ವೇತನದ ಬಗ್ಗೆ. |
| | ಶ್ರೀಮತಿ ವೈ.ಕೆ.ಪವಿತ್ರ ಹಾಗೂ ಡಾ. ಚೈತ್ರ ನಾರಾಯಣ ಅವರುಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಕ್ರೀಡೆಯ ತರಬೇತುದಾರರು ಮತ್ತು ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ಸುಮಾರು ವರ್ಷದಿಂದ ವೇತನವನ್ನು ಪರಿಷ್ಕರಿಸಿರುವುದಿಲ್ಲ. ಹಾಗೂ ರಾಷ್ಟ್ರೀಯ ಮಟ್ಟದಲ್ಲಿ/ಜಿಲ್ಲಾವಾರು ಮಟ್ಟದಲ್ಲಿ ಪ್ರಶಸ್ತಿಗಳನ್ನು/ಯಶಸ್ಸನ್ನು ಪಡೆದಿರುವುದಕ್ಕೆ ಇವರ ಪರಿಶ್ರಮ ಅಪಾರವಾದುದು. ಆದ್ದರಿಂದ ಸದರಿ ಉದ್ಯೋಗಿಗಳಿಗೆ ವೇತನ ಪರಿಷ್ಕರಿಸಬೇಕೆಂದು ಪ್ರಸ್ತಾಪಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಕ್ರೀಡೆಯ ತರಬೇತುದಾರರು ಮತ್ತು ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರುಗಳ ವೇತನವನ್ನು ಪರಿಷ್ಕರಣೆ/ನಿಗದಿಪಡಿಸುವುದನ್ನು ಮಾನ್ಯ ಕುಲಪತಿಯವರ ವಿವೇಚಾನುಸಾರ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |
| ವಿಶೇಷ ಸಭೆ 2022/III.21 | ದಿನಾಂಕ : 31-10-2022ರ ಅಪರಾಹ್ನ 3.30 ಗಂಟೆಗೆ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ಪ್ರೊ. ಡಿ.ಆನಂದ್ ಅವರ ಅಧ್ಯಕ್ಷತೆಯಲ್ಲಿ "ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಶಿಷ್ಯವೇತನ ಪರಿಷ್ಕರಿಸುವ ಸಂಬಂಧ" ನಡೆದ ಸಭೆಯ ನಡವಳಿ. |
| | ಡಾ. ಈ.ಸಿ.ನಿಂಗರಾಜ್ ಗೌಡ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಕ್ರಮವಾಗಿ ರೂ.26,000/- ಹಾಗೂ ರೂ.29,000/- ಶಿಷ್ಯವೇತನವನ್ನು ಪರಿಷ್ಕರಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ತೀರ್ಮಾನ | ದಿನಾಂಕ : 31-10-2022ರ ಅಪರಾಹ್ನ 3.30 ಗಂಟೆಗೆ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ಪ್ರೊ. ಡಿ.ಆನಂದ್ ಅವರ ಅಧ್ಯಕ್ಷತೆಯಲ್ಲಿ "ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಶಿಷ್ಯವೇತನ ಪರಿಷ್ಕರಿಸುವ ಸಂಬಂಧ" ನಡೆದ ಸಭೆ ನಡವಳಿಯನ್ನು ಪರಿಶೀಲಿಸಿದ ಸಭೆಯು ಕೆಲವೊಂದು ಶಿಫಾರಸುಗಳನ್ನು ಜಾರಿಗೊಳಿಸಲು ಹಾಗೂ ಈ ಕೆಳಕಂಡಂತೆ ಶಿಷ್ಯವೇತನವನ್ನು ಪರಿಷ್ಕರಿಸಲು ತೀರ್ಮಾನಿಸಲಾಯಿತು.<br>ಕಿರಿಯ ಸಂಶೋಧಕರುಗಳ ಶಿಷ್ಯವೇತನ - ರೂ. 26,000/-<br>ಹಿರಿಯ ಸಂಶೋಧಕರುಗಳ ಶಿಷ್ಯವೇತನ - ರೂ. 29,000/- |
| ವಿಶೇಷ ಸಭೆ 2022/III.22 | ಹಾಸನಾಂಭ ಶಿಕ್ಷಣ ಮಹಾವಿದ್ಯಾಲಯ, ಹಾಸನ ಕಾಲೇಜು ಮುಚ್ಚುವ ಬಗೆಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನಿಂದ ಹಾಸನಾಂಭ ಶಿಕ್ಷಣ ಮಹಾವಿದ್ಯಾಲಯ, ಹಾಸನ ಕಾಲೇಜು ಮುಚ್ಚುವ ಸಂಬಂಧ ವಿಶ್ವವಿದ್ಯಾನಿಲಯದಿಂದ ಕೋರಿರುವ ನಿರಾಕ್ಷೇಪಣಾ ಪತ್ರವನ್ನು (No Objection Certificate) ನೀಡುವುದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು. |

| | |
|---|---|
| **ವಿಶೇಷ ಸಭೆ 2022/III.23** | Promotions to University Teachers Under UGC-CAS |
| **ತೀರ್ಮಾನ** | The recommendations of the Selection Committee in various subjects for promotion of teachers in various disciplines to the next academic level furnished at Annexure is approved. Further, the Syndicate has also decided to extend the monetary benefits to the teachers from the date of the decision of the Syndicate. |
| **ವಿಶೇಷ ಸಭೆ 2022/III.24** | ಮೈಸೂರು ವಿಶ್ವವಿದ್ಯಾನಿಲಯ ಕೆರಿಯರ್ ಹಬ್‌ನ ಸಲಹಾ ಸಮಿತಿ ಸಭೆಯ ನಡವಳಿ ಬಗೆಗೆ. |
| **ತೀರ್ಮಾನ** | ದಿನಾಂಕ: 20-09-2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಮಿತಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ವಿಶೇಷ ಸಭೆ 2022/III.25** | ದಿನಾಂಕ: 28-10-2022ರಂದು ನಡೆದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಿಲಯಗಳ ಅನಧಿಕೃತವಾಗಿ ವಾಸವಿರುವ ವ್ಯಕ್ತಿಗಳ ಪತ್ತೆ ಹಚ್ಚುವ ಸಂಬಂಧ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಪಾವತಿಸಿರುವ ಭೋಜನ ಶುಲ್ಕವನ್ನು ವಸೂಲಾತಿ ಹಾಗೂ ಸಂಶೊಧನಾ ವಿದ್ಯಾರ್ಥಿಗಳಿಗೆ ಹೆಚ್.ಆರ್.ಎ. ಮತ್ತು ಮೆಸ್ ಬಿಲ್ ಪಾವತಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 28-10-2022ರಂದು ನಡೆದ ಸಿಂಡಿಕೇಟ್ ಉಪ ಸಮಿತಿ ಸಭೆ ನಡವಳಿಯ ಶಿಫಾರಸುಗಳನ್ನು ಅಳವಡಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ವಿಶೇಷ ಸಭೆ 2022/III.26** | ವಿಶ್ವವಿದ್ಯಾನಿಲಯದ ಯುನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜಿಗೆ ತಾತ್ಕಾಲಿಕ ಅಧ್ಯಾಪಕರನ್ನು ನೇಮಿಸುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಯುನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜಿಗೆ 2022-23ನೇ ಶೈಕ್ಷಣಿಕ ಸಾಲಿಗೆ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳ ಮುಖಾಂತರ ತಾತ್ಕಾಲಿಕ ಅಧ್ಯಾಪಕರುಗಳನ್ನು ಹಾಗೂ ತಾತ್ಕಾಲಿಕ ಪ್ರಯೋಗಾಲಯ ಅಧ್ಯಾಪಕ ಸಹಾಯಕರುಗಳನ್ನು ನೇಮಕಾತಿ ಮಾಡಿಕೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ವಿಶೇಷ ಸಭೆ 2022/III.27** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ವಿಷಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳನ್ನು 2022-23ನೇ ಶೈಕ್ಷಣಿಕ ಸಾಲಿಗೆ ಆಹ್ವಾನಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಘಟಕ/ಸ್ವಾಯತ್ತ ಕಾಲೇಜುಗಳಲ್ಲಿನ ಸ್ನಾತಕ ವಿಷಯಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ಆಹ್ವಾನಿಸುವುದರ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ಘನ ರಾಜ್ಯ ಸರ್ಕಾರವು ಹೊಸದಾಗಿ ರಾಷ್ಟ್ರೀಯ ಶಿಕ್ಷಣ ನೀತಿ ಯೋಜನೆಯನ್ನು ಅಳವಡಿಸಿದ್ದರಿಂದ, ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಆಗಿರುವ ವ್ಯತ್ಯಾಸವನ್ನು ಪರಿಗಣಿಸಿ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಳೆದ ಸಾಲಿನಲ್ಲಿ ಇದ್ದಂತೆಯೇ ಅತಿಥಿ ಉಪನ್ಯಾಸಕರುಗಳನ್ನು ಆಹ್ವಾನಿಸಲು ಹಾಗೂ ನಿಯಮದಂತೆ ಖಾಯಂ ಅಧ್ಯಾಪಕರುಗಳು, ಸಂಶೋಧನಾ ವಿದ್ಯಾರ್ಥಿಗಳು, ನ್ಯಾಯಾಲಯದಲ್ಲಿ ಮೊರೆ ಹೋಗಿರುವ ಅತಿಥಿ ಉಪನ್ಯಾಸಕರುಗಳ ಮತ್ತು ಕಳೆದ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳಿಗೆ ಹಂಚಿಕೆ ಮಾಡಿ, ಇನ್ನುಳಿದ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಸಿಂಡಿಕೇಟ್ ಸಭೆಯು ಈಗಾಗಲೇ ತೀರ್ಮಾನಿಸುವಂತೆ ನೇರ ಸಂದರ್ಶನದ ಮುಖೇನ ಅರ್ಹ ಅತಿಥಿ ಉಪನ್ಯಾಸಕರುಗಳನ್ನು ಆಹ್ವಾನಿಸಲು ತೀರ್ಮಾನಿಸಿತು. |

| | |
|---|---|
| ವಿಶೇಷ ಸಭೆ 2022/III.28 | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿಚಾರದಲ್ಲಿ ಸುಮಾರು 46 ವಿದ್ಯಾರ್ಥಿಗಳಿಗೆ ಅವರು ಶಿಷ್ಯವೇತನವನ್ನು ನೋಂದಣಿಯಾದ ಕೆಲವು ತಿಂಗಳು ವರ್ಷಗಳ ನಂತರ ನೀಡಲಾಗಿದೆ. ಅಂತಹ ವಿದ್ಯಾರ್ಥಿಗಳು ಉಳಿದ ಅವಧಿಯ ಶಿಷ್ಯವೇತನದ ಬಾಕಿ ಶಿಷ್ಯವೇತನವನ್ನು ಕೊಡುವಂತೆ ಕೋರಿರುತ್ತಾರೆ. |
| ತೀರ್ಮಾನ | 2020-21 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ವತಿಯಿಂದ ಪಿಹೆಚ್.ಡಿ ಶಿಷ್ಯವೇತನಕ್ಕೆ ಆಯ್ಕೆಯಾಗಿದ್ದ 46 ಸಂಶೋಧಕರುಗಳಿಗೆ ತಾತ್ಕಾಲಿಕ ನೋಂದಣಿ ದಿನಾಂಕದಿಂದ ಶಿಷ್ಯವೇತನಕ್ಕೆ ವರದಿ ಮಾಡಿಕೊಂಡ ದಿನಾಂಕದವರೆಗೆ ಮಾಹೆಯಾನ ರೂ.20,000/-ಗಳ ಶಿಷ್ಯವೇತನ ಮತ್ತು ನಿಯಮಾನುಸಾರ ಹೆಚ್.ಆರ್.ಎ. ಗಳ ಹಿಂಬಾಕಿಯನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬರಬೇಕಾಗಿರುವ ಶಿಷ್ಯವೇತನದ ಬಾಕಿ ಅನುದಾನವು ಬಿಡುಗಡೆಯಾದ ನಂತರ ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿದೆ. |

**ಇತರೆ ವಿಷಯಗಳು:**

| | |
|---|---|
| ವಿಶೇಷ ಸಭೆ 2022/III.ಇತರೆ ವಿಷಯಗಳು | ಬಾಕಿ ಇರುವ ರೂ.15 ಕೋಟಿ ಹುಂಡಿಗಳ ಪಾವತಿ ಬಗ್ಗೆ. |
| ತೀರ್ಮಾನ | ಎಲ್ಲಾ ಪ್ರವೇಶಾತಿಗಳ ದಿನಾಂಕಗಳು ಮುಂದೂಡಿರುವುದರಿಂದ ಪ್ರವೇಶಾತಿ ಶುಲ್ಕಗಳು ವಿಶ್ವವಿದ್ಯಾನಿಲಯಕ್ಕೆ ಬರುವುದು ತಡವಾಗುತ್ತಿದೆ. ಈ ಹಿನ್ನೆಲೆಯಲ್ಲಿ "ಸಾಮಾನ್ಯ ರೆವಿನ್ಯೂ ಖಾತೆ"ಯಲ್ಲಿ ಹಣದ ಕೊರತೆ ಇದೆ. ಆದ್ದರಿಂದ (1) School of Engineering, (2) School of Planning and Architecture, (3) International Centre and (4) Examination ಖಾತೆಗಳಲ್ಲಿ ಇರುವಂತಹ ಹಣವನ್ನು ಅವಶ್ಯಕತೆಗೆ ಅನುಗುಣವಾಗಿ GRA, I.I.D.F, I.D.F and Collaboration ನಿಧಿಗಳಿಗೆ ಹಣವನ್ನು ವರ್ಗಾಯಿಸಿ, ಹುಂಡಿಗಳನ್ನು ಪಾವತಿ ಮಾಡುವುದಕ್ಕೆ ಕುಲಪತಿಗಳ ವಿವೇಚಾನುಸಾರ ನಿರ್ಧಾರ ಮಾಡಲು ಅನುಮತಿಸಲಾಯಿತು ಹಾಗೂ ಡಿಸೆಂಬರ್ 2022ರ ಅಂತ್ಯದೊಳಗೆ ಬಾಕಿ ಇರುವ ಎಲ್ಲಾ ಹುಂಡಿಗಳನ್ನು ಪಾವತಿಸಲು ನಿರ್ಣಯಿಸಲಾಯಿತು. |
| ವಿಶೇಷ ಸಭೆ 2022/III.ಇತರೆ ವಿಷಯಗಳು | ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಆವರಣದಲ್ಲಿ ಸಾರ್ವಜನಿಕರ ವಾಯುವಿಹಾರವನ್ನು ನಿಷೇಧಿಸಿರುವ ಬಗ್ಗೆ. |
| ತೀರ್ಮಾನ | ಮಾನಸಗಂಗೋತ್ರಿಯು ವಾಯುವಿಹಾರಕ್ಕೆ ಅತ್ಯಂತ ಸೂಕ್ತ ಜಾಗವಾಗಿದೆ. ಹಸಿರು ಪರಿಸರ, ಸಮೀಪದಲ್ಲಿ ಕುಕ್ಕರಹಳ್ಳಿ ಕೆರೆ ಇರುವುದರಿಂದ ಆರೋಗ್ಯ ವಾತಾವರಣ ಇದೆ. ಹಾಗಾಗಿಯೇ ಗಂಗೋತ್ರಿಗೆ ಹೊರಗಡೆಯಿಂದ ಕೂಡ ಜನರು ವಾಯುವಿಹಾರಕ್ಕಾಗಿ ಆಗಮಿಸುತ್ತಾರೆ. ಆದರೆ, ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಅಪಘಾತದಲ್ಲಿ ಮೃತಪಟ್ಟ ನಿವೃತ್ತ ಐ.ಬಿ (ಇಂಟೆಲಿಜೆನ್ಸ್ ಬ್ಯುರೋ) ಅಧಿಕಾರಿಯಾದ ಶ್ರೀ ಆರ್.ಎಸ್.ಕುಲಕರ್ಣಿ ಸಾವಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನಸಗಂಗೋತ್ರಿಯಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳು, ಬೋಧಕರು, ಸಿಬ್ಬಂದಿ ಮತ್ತು ವಾಯುವಿಹಾರಿಗಳಲ್ಲೂ ಒಂದು ರೀತಿಯ ಅಭದ್ರತೆ ಉಂಟಾಗಿದೆ.<br><br>ಈ ಪ್ರಕರಣದ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮುಂದಿನ ಆದೇಶದವರೆಗೆ ಬೆಳಗ್ಗೆ ಮತ್ತು ಸಂಜೆ ಸಾರ್ವಜನಿಕರಿಗೆ ವಾಯುವಿಹಾರವನ್ನು ನಿಷೇಧಿಸಲು ತೀರ್ಮಾನಿಸಲಾಯಿತು. |

| | |
|---|---|
| **ವಿಶೇಷ ಸಭೆ 2022/III.ಇತರೆ ವಿಷಯಗಳು** | 2022-23ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಟ್ರಸ್ಟ್ ವತಿಯಿಂದ ಭಾರತ ರತ್ನ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಟ್ರಸ್ಟ್ ವತಿಯಿಂದ 2022-23ನೇ ಸಾಲಿನಲ್ಲಿ 1) Bharat Ratna Sir M.Visvesvaraya Centenary Award for Innovation Technology, 2) Bharat Ratna Dr. S.Radhakrishnan Centenary Award for Social Sciences and 3) Bharat Ratna Prof.C.N.R.Rao Centenary Award for Science ಹೆಸರಿನಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಂಬಂಧ ಪ್ರಕಟಣೆ (ವಿಶ್ವವಿದ್ಯಾನಿಲಯ ಸಂಖ್ಯೆ: ಜಿಎಲ್.2/219/2015-16, ದಿನಾಂಕ: 19-10-2022) ಹೊರಡಿಸಲಾಗಿದ್ದು, ಇದರನ್ವಯ ಮೈಸೂರು ವಿಶ್ವವಿದ್ಯಾನಿಲಯದ ಭಾರತ ರತ್ನ ಶತಮಾನೋತ್ಸವ ಪ್ರಶಸ್ತಿಗಳಿಗೆ 17 ನಾಮನಿರ್ದೇಶನ ಅರ್ಜಿದಾರರುಗಳ (Dr. S.C. Sharma, Prof. Balaram, Dr. Kota Harinarayana, Prof. S. Sadagopan, Dr. Vijay Raghavan, Prof. S.L. Byrappa, Dr. C.N. Manjunath, Dr. Krishnaswamy Kasturirangan, Dr. Vijayalakshmi Ravindranath, Prof. (Mrs.) Anupama Sharma, Dr. S. Selladurai, Dr. P. Dowlath Khan, Cheluvaraju Thimmaiah, Dr. S. Christopher, Prof. K.S. Rangappa, Ms. Suma Varughese and Prof. Chandrashekhar Rao) ಹೆಸರುಗಳನ್ನು ಸೂಚಿಸಲಾಗಿದೆ. ಈ ಸಂಬಂಧ ಆಯ್ಕೆ ಸಮಿತಿಯು ಇವರುಗಳಲ್ಲಿ ಮೂವರನ್ನು ಆಯ್ಕೆ ಮಾಡಿ, ಪ್ರಶಸ್ತಿಗಳನ್ನು ಪ್ರದಾನ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ವಿಶೇಷ ಸಭೆ 2022/III.ಇತರೆ ವಿಷಯಗಳು** | ದಿನಾಂಕ: 20-01-2022 ರಂದು "ಅಧ್ಯಾಪಕೇತರ ಉದ್ಯೋಗಿಗಳ ಜೇಷ್ಠತಾ ಪಟ್ಟಿ" ಸಿದ್ಧಪಡಿಸುವ ಸಂಬಂಧ ನಡೆದ ಸಭೆಯ ನಡವಳಿ. |
| | ಡಾ. ಸೈಯದ್ ಕಾರ್ಝು ಮೊಹಿದ್ದೀನ್, ಶ್ರೀ ಎಸ್.ಡಿ. ದೊಡ್ಡಚಾರಿ ಹಾಗೂ ಡಾ. ಎಂ.ಎಸ್. ದಾಮೋದರ ಅವರುಗಳು ಮಾತನಾಡಿ, ವಿದ್ಯಾರ್ಥಿನಿಲಯದ ಜೇಷ್ಠತಾ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಲಾಗಿದೆ. ಆ ಉದ್ಯೋಗಿಗಳು ಸಹ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳಾಗಿರುವುದರಿಂದ, ಪ್ರತ್ಯೇಕ ಜೇಷ್ಠತಾ ಪಟ್ಟಿಯ ಬದಲು ವಿದ್ಯಾರ್ಥಿನಿಲಯದ ಉದ್ಯೋಗಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದ "ಅಧ್ಯಾಪಕೇತರ ಉದ್ಯೋಗಿಗಳ ಜೇಷ್ಠತಾ ಪಟ್ಟಿ"ಯಲ್ಲಿ ಸೇರ್ಪಡೆಗೊಳಸಬೇಕೆಂದು ತಿಳಿಸಿದರು. |
| ತೀರ್ಮಾನ | ದಿನಾಂಕ: 20-01-2022 ರಂದು "ಅಧ್ಯಾಪಕೇತರ ಉದ್ಯೋಗಿಗಳ ಜೇಷ್ಠತಾ ಪಟ್ಟಿ" ಸಿದ್ಧಪಡಿಸುವ ಸಂಬಂಧ ನಡೆದ ಸಭೆಯ ನಡವಳಿಯ ಶಿಫಾರಸುಗಳನ್ನು ಪುನರ್ ಪರಿಶೀಲಿಸಲು ಸಭೆಯು ತೀರ್ಮಾನಿಸಿತು. |
| **ವಿಶೇಷ ಸಭೆ 2022/III.ಇತರೆ ವಿಷಯಗಳು** | ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ 22-04-2022ರ ಪೂರ್ವಾಹ್ನ 3.30 ಗಂಟೆಗೆ "ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಪ್ರಭಾರ ಪ್ರಾಂಶುಪಾಲರುಗಳನ್ನು ನೇಮಕಾತಿ ಮಾಡುವ ಸಂಬಂಧ" ನಡೆದ ಸಭೆಯ ನಡವಳಿ ಬಗ್ಗೆ. |
| | ಶ್ರೀ ಎಸ್.ಡಿ. ದೊಡ್ಡಚಾರಿ ಹಾಗೂ ಡಾ. ಎಂ.ಎಸ್. ದಾಮೋದರ ಅವರುಗಳು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿರುವ 07 ಘಟಕ ಕಾಲೇಜುಗಳಿಗೂ ಏಕರೂಪದ |

| | |
|---|---|
| | ಮಾನದಂಡಗಳನ್ನು ಅಳವಡಿಸಿಕೊಳ್ಳಬೇಕೆಂದು ಸಿಂಡಿಕೇಟ್ ಉಪ ಸಮಿತಿ ಸಭೆಯಲ್ಲಿ ಶಿಫಾರಸುಗಳನ್ನು ಸಲ್ಲಿಸಲಾಗಿದೆ. ಆದರೆ, ಇದುವರೆವಿಗೂ ಕಾರ್ಯಗತಗೊಳಸಿರುವುದಿಲ್ಲ ತಿಳಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ 22-04-2022ರಂದು "ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಗೆ ಪ್ರಭಾರ ಪ್ರಾಂಶುಪಾಲರುಗಳನ್ನು ನೇಮಕಾತಿ ಮಾಡುವ ಸಂಬಂಧ" ನಡೆದ ಸಭೆಯ ನಡವಳಯ ಶಿಫಾರಸುಗಳನ್ನು ಅನುಷ್ಠಾನಗೊಳಸುವ ಸಂಬಂಧ ಪ್ರೊ. ಡಿ. ಆನಂದ್ ಅವರ ಅಧ್ಯಕ್ಷತೆಯೊಂದಿಗೆ ಸಿಂಡಿಕೇಟ್ ಸದಸ್ಯರಾದ ಡಾ. ಈ.ಸಿ. ನಿಂಗರಾಜ್ ಗೌಡ ಅವರನ್ನೊಳಗೊಂಡಂತೆ ಸಮಿತಿ ರಚಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. |

1) ಪ್ರೊ. ಜಿ. ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಪ್ರಾಧ್ಯಾಪಕರುಗಳು ವಯೋನಿವೃತ್ತಿ ನಂತರ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಆದೇಶದ ರೀತ್ಯಾ ಸೇವೆಯಲ್ಲಿ ಮುಂದುವರೆದಿರುತ್ತಾರೆ. ಈ ಸಂಬಂಧ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಸ್ಪಷ್ಟವಾಗಿ ತಿಳಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸದ್ಯಕ್ಕೆ **ವಿಶ್ವವಿದ್ಯಾನಿಲಯದ ಅಧಿನಿಯಮ Conditions of Service 1984ರ clause (3)ರನ್ವಯ** ಕ್ರಮ ತೆಗೆದುಕೊಂಡು ಸೆಮಿಸ್ಟರ್ ಅಂತ್ಯದೊಳಗೆ ರೂ.25,000/-ಗಳ ಗೌರವಧನದೊಂದಿಗೆ ಮುಂದುವರೆಸಲಾಗಿದೆ. 10-15 ದಿನದೊಳಗೆ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯವು ಅಂತಿಮ ತೀರ್ಮಾನ ತೆಗೆದುಕೊಳ್ಳುವುದರಿಂದ, ನ್ಯಾಯಾಲಯದ ಆದೇಶದನ್ವಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಸಿದರು.

2) ಮಾನ್ಯ ಕುಲಸಚಿವರಾದ ಪ್ರೊ. ಆರ್. ಶಿವಪ್ಪ, ಕಾಲೇಜು ಶಿಕ್ಷಣ ಮಂಡಳಯ ಆಯುಕ್ತರಾದ ಡಾ. ಎಂ.ಎಸ್. ಗಿರಿಧರ್ ರಾವ್, ಪ್ರೊ. ಎಚ್. ರಾಜಶೇಖರ್, ಶ್ರೀ ಎಂ.ಬಿ. ಗಪ್ಪಣ್ಣ, ಡಾ. ಚೈತ್ರ ನಾರಾಯಣ, ಡಾ. ಸೈಯದ್ ಕಾಝು ಮೊಹಿದ್ದೀನ್, ಡಾ. ನಿರ್ಮಲ ಹೆಚ್.ಎಂ, ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಸ್.ಡಿ. ದೊಡ್ಡಚಾರಿ ಶ್ರೀಮತಿ ವೈ.ಕೆ. ಪವಿತ್ರ, ಡಾ. ಈ.ಸಿ.ನಿಂಗರಾಜ್ ಗೌಡ, ಡಾ. ಎಂ.ಎಸ್. ದಾಮೋದರ ಹಾಗೂ ಕುಲಸಚಿವ (ಪರೀಕ್ಷಾಂಗ)ರಾದ ಪ್ರೊ. ಎ.ಪಿ. ಜ್ಞಾನಪ್ರಕಾಶ್ ಅವರುಗಳು "ಮಾನ್ಯ ಕುಲಪತಿಯವರು 04 ವರ್ಷಗಳ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಏಳಗೆಗೆ ಸಾಕಷ್ಟು ಶ್ರಮಿಸಿರುತ್ತಾರೆ. ಇವರ ಅವಧಿಯಲ್ಲಿ ಆಡಳತ ಹಾಗೂ ಶೈಕ್ಷಣಿಕ ಮಟ್ಟದಲ್ಲಿ ಉನ್ನತ ಮಟ್ಟವನ್ನು ತಲುಪಿದೆ. ಅಷ್ಟೇ ಅಲ್ಲದೆ ಸಿಂಡಿಕೇಟ್ ಸದಸ್ಯರುಗಳಗೆ/ ಶಿಕ್ಷಣ ಮಂಡಳ ಸದಸ್ಯರುಗಳಗೆ/ ಉದ್ಯೋಗಿಗಳಗೆ/ವಿದ್ಯಾರ್ಥಿಗಳಗೆ/ಸಂಶೋಧಕರುಗಳಗೆ ಹಾಗೂ ಸಾರ್ವಜನಿಕರುಗಳಗೆ ಆಡಳತ ಹಾಗೂ ಶೈಕ್ಷಣಿಕವಾಗಿ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು. ಇವರು ಇನ್ನು ಒಳ್ಳೆಯ ಹುದ್ದೆಯನ್ನು ಅಲಂಕರಿಸಲಿ ಎಂದು ಸಭೆಯಲ್ಲಿ ಶ್ಲಾಘಿಸಿದರು.

3) ಪ್ರೊ ನಾಗೇಂದ್ರಪ್ಪ ಜಿ. ನಿವೃತ್ತ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರ ಮನವಿಗೆ ಸಂಬಂಧಿಸಿದಂತೆ ಸದರಿಯವರು ನಿವೃತ್ತಿ ನಂತರ ವಸತಿ ಗೃಹದಲ್ಲಿ ವಾಸಿಸಿರುವ ಅವಧಿಗೆ ರಿಯಾಯತಿ ಶುಲ್ಕ ಪಾವತಿಸಲು ಅನುಮತಿ ನೀಡಲಾಯಿತು. ಹಾಗೂ ಸದರಿಯವರು ಕೋರಿರುವ ಇನ್ನಿತ್ತರ ಮಾಹಿತಿಗಳ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡಲು ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಆಡಳತ ಹಾಗೂ ಶೈಕ್ಷಣಿಕ ಮುನ್ನಡೆಯಲು ಇದುವರೆವಿಗೂ ಸಲಹೆ ಹಾಗೂ ಸಹಕಾರಗಳನ್ನು ನೀಡಿರುವ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಗೆ ವೈಯಕ್ತಿಕವಾಗಿ ವಂದನೆಗಳನ್ನರ್ಪಿಸಿದರು.

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಸಲಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು